ಓ ಎಸ್ಃ 209/2016

ಪಿ ಡಬ್ಲ್ಯೂ ಃ 1

ದಿನಾಂಕಃ 03.09.2025 ರಂದು ಮಧ್ಯಂತರ ಅರ್ಜಿ ಆದೇಶದ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 6 ರವರ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ**

ಶೆಡ್ಯೂಲ್ ಎ ಸ್ವತ್ತನ್ನು ಎಷ್ಟು ಪೋಡಿ ಮಾಡಿರುತ್ತಾರೆ ಎಂದು ನನಗೆ ಗೊತ್ತಾಗುವುದಿಲ್ಲ. ಸ.ನಂ. 40 ರಲ್ಲಿ ಎಷ್ಟು ಜನರ ಹೆಸರಿನಲ್ಲಿ ಪಹಣಿಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಯಾರ ಯಾರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸ.ನಂ. 40 ರಲ್ಲಿ 8 ಎಕರೆ 14 ಗುಂಟೆಗೆ ಸ್ವತ್ತಿಗೆ ಸಂಬಂದಪಟ್ಟ ಎಲ್ಲ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸ.ನಂ. 40 ರಲ್ಲಿ ಪಾರ್ವತಮ್ಮ ನವರ ಹೆಸರಿಗೆ ಯಾವ ಸ್ವತ್ತು ಪೋಡಿಯಾಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಸ.ನಂ. 40 ರಲ್ಲಿ ಪ್ರತಿವಾದಿ 6 ರವರ ಹೆಸರಿನಲ್ಲಿ ಎಷ್ಟು ಪಹಣಿಗಳು ಮತ್ತು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಪಾರ್ವತಮ್ಮ ಮತ್ತು ಬಸವರಾಜು ರವರು ಸ್ವಾಧೀನದಲ್ಲಿರುವ ಜಮೀನಿನ ಮೇಲೆ ನಾನು ದಾವೆ ಹಾಕಿರುತ್ತೇನೆ.
ಸದರಿ ಶೆಡ್ಯೂಲ್ ಎ ಸ್ವತ್ತಿನಲಿ ಬೇರೆ ಯಾರು ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸಾಕ್ಷಿ ನಾವು ಮೊದಲು ಸ್ವಾಧೀನದಲ್ಲಿದ್ದೇವು , ಪ್ರತಿವಾದಿಗಳು ನಮ್ಮನ್ನು ಅಲ್ಲಿಂದ ಹೊರಗೆ ಹಾಕಿರುತ್ತಾರೆ, ಈಗ ನಾವು ಸ್ವಾಧೀನದಲ್ಲಿರುವುದಿಲ್ಲ. ನನ್ನನ್ನು ಸುಮಾರು 10 ವರ್ಷಗಳ ಹಿಂದೆ ಈ ದಾವೆಯನ್ನು ಹಾಕುವ ಮುಂಚೆ ಪ್ರತಿವಾದಿಗಳು ನನ್ನ ಜೊತೆ ಜಗಳ ಮಾಡಿ ನನ್ನನ್ನು ಸ್ವಾಧೀನದಿಂದ ಹೊರಗೆ ಹಾಕಿರುತ್ತಾರೆ. ಗಲಾಟೆ ಮಾಡಿ ಪ್ರತಿವಾದಿಗಳು ನನ್ನನ್ನು ದಾವಾ ಸ್ವತ್ತಿನಿಂದ ಈ ದಾವೆಯನ್ನು ಹೂಡುವ ಮುಂಚೆ ಸ್ವಾಧೀನ ಬಿಡಿಸಿರುತ್ತಾರೆ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ನಾವು ಸ್ವಾಧೀನದಲ್ಲಿದ್ದೇವು ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ಕೊಟ್ಟಿಲ್ಲ.

ಈ ದಾವೆಯಲ್ಲಿ ಸ್ವಾಧೀನ ಕೊಡಿಸಿ ಎಂದು ನಾನು ದಾವೆಯನ್ನು ಹಾಕಿರುವುದಿಲ್ಲ ಎಂದರೆ ನಮ್ಮ ತಂದೆಗೆ ಭಾಗ ಕೊಡಬೇಕೆಂದು ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಎಲ್ಲ ಪಕ್ಷಗಾರರನ್ನು ಮತ್ತು ಕಂದಾಯ ದಾಖಲಾತಿಗಳಲ್ಲಿ ಹೆಸರು ಬರುತ್ತಿರುವ ಎಲ್ಲ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಪ್ರತಿವಾದಿ 6 ರವರಿಗೆ ಯಾವ ಆಧಾರದ ಮೇಲೆ ಆಸ್ತಿ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಈ ತಕರಾರನ್ನು ನಮ್ಮ ವಕೀಲರಿಂದ ಓದಿ ತಿಳಿದುಕೊಂಡಿರುವುದಿಲ್ಲ. ಪಾರ್ವತಮ್ಮ ನವರು ಯಾರ ಕಡೆಯಿಂದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಾರ್ವತಮ್ಮ ನವರು ಆಸ್ತಿಯನ್ನು ಖರೀದಿ ಮಾಡುವ ಮುಂಚೆ ಯಾವ ರೀತಿ ಮಾಲೀಕತ್ವ ಸದರಿ ಆಸ್ತಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಅದು ನಮ್ಮ ತಾತನ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ನಮ್ಮ ತಾತನ ಆಸ್ತಿ ಎಂದು ತೋರಿಸಲು ಯಾವ ದಾಖಲಾತಿಗಳನ್ನು ನೀಡಿರುತ್ತೀರಾ ಎಂದರೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಇ ಸಿ ಯನ್ನು ಪರಿಶೀಲನೆ ಮಾಡಿರುವುದಿಲ್ಲ. ದಾವಾ ಸ್ವತ್ತು ಮೂಲ ನಮ್ಮ ತಾತನಿಗೆ ಸಂಬಂದಪಟ್ಟ ಸ್ವತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ. 1956 ರಿಂದ ಇಲ್ಲಿಯವರೆವಿಗೂ ದಾವಾ ಆಸ್ತಿಗಳಲ್ಲಿ ಬೇರೆ ಬೇರೆಯವರ ಹೆಸರು ಇರುತ್ತವೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಹೇಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ಬೇರೆಯವರ ಹೆಸರಿನಲ್ಲಿ ಇರುತ್ತದೆ. ನನ್ನ ತಾತನ ಹೆಸರಿಗೆ ಇರುವ ಹಳೆಯ ದಾಖಲಾತಿ ಯಾವ ದಾಖಲಾತಿ ಎಂದರೆ ನನಗೆ ಗೊತ್ತಿಲ್ಲ, ನನ್ನ ತಾತನ ಹೆಸರಿಗೆ ಯಾವ ದಾಖಲಾತಿ ಇತ್ತು ಎಂದು ಹೇಳಲು ನನಗೆ ಆಗುವುದಿಲ್ಲ. 1956 ರಲ್ಲಿ ಆರ್ ಗಂಗಯ್ಯ, ರಂಗನಾಥಯ್ಯ ಮತ್ತು ವೆಂಕಟಲಕ್ಷ್ಮಮ್ಮ ರವರು ದಾವಾ ಶೆಡ್ಯೂಲ್ ಎ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತು ಆರ್ ಗಂಗಯ್ಯ ನವರ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ಸದರಿ ಸ್ವತು ನನ್ನ ತಾತನ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ನನ್ನ ತಾತನ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸುಳ್ಳು.

ಆರ್ ಗಂಗಯ್ಯ ನವರು 1960 ರಲ್ಲಿ ಶ್ರೀರಂಗಯ್ಯ ಮತ್ತು ಕಾಂತರಾಜು ರವರಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಶ್ರೀರಂಗಯ್ಯ ಮತ್ತು ಕಾಂತರಾಜು ರವರು ಸೇರಿ 1960 ರಲ್ಲಿ ರಾಮಯ್ಯ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಇದೇ ದಾವಾ ಎ ಸ್ವತ್ತಿಗೆ ಸಂಬಂದಪಟ್ಟ ಮತ್ತೊಂದು ಸ್ವತ್ತನ್ನು ಶ್ರೀರಂಗಯ್ಯ ಮತ್ತು ಕಾಂತರಾಜು ರವರು ನಾಗರಾಜು ರವರಿಗೆ 1994 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 1995 ರಲ್ಲಿ ರೇವಮ್ಮ ಮತ್ತು ಬಾನುಮತಿ ರವರು ನಾಗರಾಜು ರವರ ಸ್ವತ್ತನ್ನು 2 ಭಾಗಗಳಾಗಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಸದರಿ ಭಾನುಮತಿ ಮತ್ತು ರೇವಮ್ಮ ನವರು ಖರೀದಿ ಮಾಡಿದ ಸ್ವತ್ತನ್ನು ಪ್ರತಿವಾದಿ 6 ರವರು 2003 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 1956 ರಿಂದ 2003 ರವರೆಗೆ ಆಗಿರುವ ವ್ಯವಹಾರಗಳನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ . 1956 ರಿಂದ 2003 ರವರೆಗೆ ಆಗಿರುವ ವ್ಯವಹಾರಗಳಲ್ಲಿ ಇರುವ

ವ್ಯಕ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ಇ ಸಿ ಯಲ್ಲಿ ಇರುವ ವ್ಯವಹಾರಗಳ ಬಗ್ಗೆ ನಾನು ನೋಡಿ ತಿಳಿದುಕೊಂಡಿರುತ್ತೇನೆ. ನಾನು ಯಾವ ವರ್ಷದಿಂದ ಇ ಸಿ ಯನ್ನು ಪರಿಶೀಲನೆ ಮಾಡಿರುತ್ತೇನೆ ಎಂದು ಕೇಳಿದರೆ ಅದು ನನ್ನ ತಮ್ಮನಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ .ನಿ ಪಿ 30 ರಲ್ಲಿ ಇರುವ ದಾಖಲಾತಿಯಲ್ಲಿ ಯಾವುದೇ entry ಗಳು ಇರುವುದಿಲ್ಲ, ಅದು ಉಪ ನೋಂದಣಾಧಿಕಾರಿಗಳ ಜೊತೆ ಶಾಮೀಲಾಗಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ.

ಪ್ರತಿವಾದಿ 6 ರವರು ಲಿಖಿತ ಹೇಳಿಕೆಯನ್ನು ಹಾಕಿದ ನಂತರ ದಾಖಲಾತಿಗಳನ್ನು ಪರಿಶೀಲನೆ ಮಾಡಲು ನಾನು ಪ್ರಯತ್ನ ಮಾಡಿರುವುದಿಲ್ಲ. ನಾನು 1956 ರಿಂದ ಆಗಿರುವ ವ್ಯವಹಾರಗಳನ್ನು ಪ್ರಶ್ನೆ ಮಾಡದೇ ಪ್ರತಿವಾದಿ 6 ರವರಿಗೆ ಮಾತ್ರ ಪ್ರಶ್ನೆ ಮಾಡಲು ಪಾರ್ವತಮ್ಮ ನವರನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ. 40 ಯಾರ ಯಾರ ನಡುವೆ ಪೋಡಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಇತ್ತೀಚೆಗೆ ನಾನು ದಾಖಲಾತಿಗಳನ್ನು ನೋಡಿ ಪರಿಶೀಲನೆ ಮಾಡಿ ನಾನು ಪೋಡಿಗಳ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಿರುತ್ತೇನಾ ಎಂದರೆ ಇಲ್ಲ. ನನಗೆ ಎಲ್ಲ ಸ್ವಾಧೀನದಾರರನ್ನು ಪಕ್ಷಗಾರರನ್ನಾಗಿ ಮಾಡಲು ಏನು ತೊಂದರೆ ಇತ್ತು ಎಂದರೆ ನಾನು ಒಂದು ಜಮೀನಿಗೆ ಒಂದೇ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮೂಲ ದಾಖಲಾತಿಗಳನ್ನು ಪ್ರಶ್ನೆ ಮಾಡದೇ ಎಲ್ಲ ವ್ಯಕ್ತಿಗಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಾವು ಬೇರೆ ಯಾರಿಗೂ ದಾಖಲಾತಿಗಳನ್ನು ಬರೆದುಕೊಟ್ಟಿಲ್ಲ ಮತ್ತು ಎಲ್ಲ ವ್ಯಕ್ತಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎನ್ನುವುದು ಸರಿ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**